# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಕೆ.ಆರ್. ನಗರ

## ಸಿ.ಸಿ.ಸಂಖ್ಯೆ: 218/2025

ಪಿರ್ಯಾದುದಾರರು : ಶ್ರೀ ಮಂಜೇಗೌಡ ಕೆ.ಪಿ.

-ವಿರುದ್ಧ-

ಆರೋಪಿ : ಶ್ರೀಮತಿ ಕಸ್ರ ಬಾನು ಎಸ್.ಎ.

* * * * *

## ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ 355 ರಡಿ ಆರೋಪಿಯ ಹೇಳಿಕೆ

**ಪ್ರಶ್ನೆ-1 :**

ಫ್ರಾಸಾ-1 ಶ್ರೀ ಮಂಜೇಗೌಡ ಕೆ.ಪಿ. ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿತರಾದ ನೀವು ಫ್ರಾಸಾ-1 ರವರಿಂದ ನಿಮ್ಮ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ರೂ.3,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಉಳಿತಾಯ ಖಾತೆ ಇರುವ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಕೆ.ಆರ್.ನಗರ ಶಾಖೆಗೆ ಸೇರಿದ ಚೆಕ್ ನಂಃ 435449, ದಿನಾಂಕಃ 24.04.2025 ರೂ.3,00,000/- ಎಂದು ನಮೂದಿಸಿ ಕೊಟ್ಟಿದ್ದೀರೆಂದು ಸಾಕ್ಷ್ಯನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :**

**ಪ್ರಶ್ನೆ-2 :**

ಫ್ರಾಸಾ-1 ಶ್ರೀ ಮಂಜೇಗೌಡ ಕೆ.ಪಿ. ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು, ತಮ್ಮ ಉಳಿತಾಯ ಖಾತೆ ಇರುವ ಇಕ್ವಾಟಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಕೆ.ಆರ್.ನಗರ ಶಾಖೆ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು "**Funds Insufficient**" ಎಂಬ ಹಿಂಬರಹದೊಂದಿಗೆ ದಿನಾಂಕ 28.04.2025 ರಂದು ಚೆಕ್ಕು ಹಿಂದಿರುಗಿತು ಎಂದು ಸಾಕ್ಷ್ಯನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :**

**ಪ್ರಶ್ನೆ3 ಃ**

ಫ್ರಾಸಾ–1 ಶ್ರೀ ಮಂಜೇಗೌಡ ಕೆ.ಪಿ. ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಅವರು ತಮ್ಮ ವಕೀಲರ ಮುಖಾಂತರ ಆರೋಪಿತರಾದ ನಿಮಗೆ ನೋಂದಾಯಿತ ಅಂಚೆ ಮೂಲಕ ದಿನಾಂಕ 06.05.2025 ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದರೂ ಸಹ ನೀವು ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ ಃ**

**ಪ್ರಶ್ನೆ4 ಃ**

ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ ?

**ಉತ್ತರ ಃ**

**ಪ್ರಶ್ನೆ5 ಃ**

ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ ?

**ಉತ್ತರ ಃ**

*(ಮೇಲ್ಕಂಡ ಆರೋಪದ ಹೇಳಿಕೆಯನ್ನು ತೆರೆದ ನಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿದ ಉತ್ತರಗಳನ್ನು ಸ್ವತಃ ನಾನೇ ಕೇಳಿಸಿಕೊಂಡು ನನ್ನ ಸ್ವ ಬರವಣಿಗೆಯಲ್ಲಿ ಉತ್ತರಗಳನ್ನು ನಮೂದು ಮಾಡಿರುತ್ತೇನೆ ಇವು ಆರೋಪಿ ತನ್ನ ಸ್ವ ಇಚ್ಛೆಯಿಂದ ನೀಡಿರುವ ಉತ್ತರಗಳಾಗಿರುತ್ತವೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)*

**ದಿನಾಂಕಃ** 18.09.2025 **ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಕೆ.ಆರ್. ನಗರ.**

Aravindra B C

Digitally signed by Aravindra B C
Date: 2025.09.20 15:49:25 +0530